

24 ಕ್ಯಾರೆಟ್ ನಗು! ಗುಕೇಶ್‌ರ ಗೆಲುವಿನ ಈ ನಗು, ಪಂದ್ಯಾವಳಿಯ ಒತ್ತಡದಿಂದ ಹೊರಬಂದ ನಿರಾಳಭಾವದ ಸಂಕೇತವೂ ಹೌದು

‘ವಿಶ್ವದಲ್ಲಿ ಈಗ ಅತಿ ಅಸ್ಥಿರ ಸಂಗತಿ ಯಾವುದು? ಭಾರತದಲ್ಲಿ ನಂಬರ್ ಒನ್ ಚೆಸ್ ಆಟಗಾರ ಯಾರೆನ್ನುವುದು’ – ಇದು ಅಜರ್‌ಬೈಜಾನ್‌ನ ಗ್ರ್ಯಾಂಡ್‌ಮಾಸ್ಟರ್ ತೀಮೊರ್ ರಾಜಾಬೋವ್ ಅವರು ಕಳೆದ ಜನವರಿಯಲ್ಲಿ ಮಾಡಿರುವ ಟ್ವೀಟ್! ಇದು ತಮಾಷೆಯಾಗಿ ಕಂಡರೂ, ಭಾರತದ ಚೆಸ್ ಆಟಗಾರರ ನಡುವೆ ಇರುವ ಪ್ರಬಲ ಸ್ಪರ್ಧೆಯನ್ನು ತೀಮೊರ್ ಅವರ ಟ್ವೀಟ್ ಸೂಚಿಸುವಂತಿದೆ.

ಭಾರತದ ಚೆಸ್ ರಾಜಧಾನಿ ಚೆನ್ನೈನಲ್ಲಿ ಜನಿಸಿದ (ಮೇ 29, 2006) ಗುಕೇಶ್ ಅವರದು ಚೆಸ್ ಹಿನ್ನೆಲೆಯ ಕುಟುಂಬವೇನೂ ಅಲ್ಲ. ತಂದೆ ರಜನೀಕಾಂತ್ ವೈದ್ಯರು, ಇಎನ್‌ಟಿ ತಜ್ಞ. ತಾಯಿ ಪದ್ಮಾ ಕುಮಾರಿ ಅವರು ಮೈಕ್ರೊಬಯೊಲಜಿಸ್ಟ್. ಹೀಗಿದ್ದೂ ಏಳನೇ ವಯಸ್ಸಿನಲ್ಲಿ ಗುಕೇಶ್‌ಗೆ ಚೆಸ್‌ನತ್ತ ಒಲವು ಮೂಡಿತು. ಈ ಒಲವು ತೀವ್ರಗೊಂಡಿದ್ದು, 2014ರಲ್ಲಿ. ಆಗ ಕಾರ್ಲ್‌ಸನ್ ಮತ್ತು ಆನಂದ್ ನಡುವೆ ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಫೈನಲ್ ನಡೆದಿತ್ತು. ಆ ಪಂದ್ಯ ಗುಕೇಶ್‌ರಿಗೆ ಪ್ರೇರಣೆಯಾಗಿ ಪರಿಣಮಿಸಿದ್ದಷ್ಟೇ ಅಲ್ಲ; ಬದುಕಿನ ದಿಕ್ಕನ್ನೂ ಬದಲಿಸಿತು.

ತಂತ್ರಜ್ಞಾನ ಸಾಕಷ್ಟು ಮುಂದುವರಿದಿದ್ದರೂ ಗುಕೇಶ್ ಮೊದಲಿಗೆ ‘ಚೆಸ್ ಎಂಜಿನ್’ ಬಳಸುತ್ತಿರಲಿಲ್ಲ. ಚೆಸ್‌ನಲ್ಲಿ ‘ಐಎಂ’ ಆದ ನಂತರವೇ ಆ ಬಗ್ಗೆ ಅವರು ಆಸಕ್ತಿ ತೋರಿಸಿದರು. ಪುಸ್ತಕಗಳನ್ನು ಓದಿಯೇ ಅವರು ತಿಳಿದುಕೊಂಡಿದ್ದು ಹೆಚ್ಚು. ಅವರು ವೇಗದ (ರ್‍ಯಾಪಿಡ್, ಬ್ಲಿಟ್ಜ್) ಮಾದರಿಗಿಂತ ಶಾಸ್ತ್ರೀಯ ಮಾದರಿಯ ಆಟದಲ್ಲೇ ಹೆಚ್ಚು ಗಮನಹರಿಸಿದ್ದರು.

ಚೆಸ್‌ನಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಕೊಳ್ಳುವ ಮಗನ ಆಸಕ್ತಿಗೆ ತಂದೆ–ತಾಯಿ ಬೆಂಬಲವಿತ್ತು. ಹೀಗಾಗಿ ಸಾಂಪ್ರದಾಯಿಕ ಶಾಲಾ ಓದನ್ನು ನಾಲ್ಕನೇ ತರಗತಿಗೇ ಮೊಟಕುಗೊಳಿಸಿದರು. ತಂದೆ ಏಳು ವರ್ಷಗಳ ಹಿಂದೆ ವೈದ್ಯಕೀಯ ವೃತ್ತಿ ತ್ಯಜಿಸಿದ್ದರು. ದಂಪತಿಗೆ ಚೆಸ್ ಜ್ಞಾನ ಅಷ್ಟೇನೂ ಇಲ್ಲ. ಆದರೆ ನೈತಿಕ ಸ್ಥೈರ್ಯ ತುಂಬಲು ತಂದೆ, ಮಗನ ಜೊತೆಗೆ ಹೊರದೇಶಗಳ ಟೂರ್ನಿಗಳಿಗೆ ಹೋಗುವುದು ಸಾಮಾನ್ಯ. ಕ್ಯಾಂಡಿಡೇಟ್ಸ್ ಟೂರ್ನಿ ವೇಳೆಯೂ ಅವರು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗುಕೇಶ್ ಮೊದಲ ಬಾರಿ ಗಮನಸೆಳೆದಿದ್ದು 2018ರಲ್ಲಿ. ಆಗ ವಿಶ್ವ ಯುವ ಚಾಂಪಿಯನ್‌ಷಿಪ್‌ನ 12 ವರ್ಷದೊಳಗಿನವರ ವಿಭಾಗದಲ್ಲಿ ಅವರು ಚಾಂಪಿಯನ್ ಆದರು. ಅದೇ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಐದು ಪ್ರಶಸ್ತಿಗಳನ್ನು ಮಡಿಲಿಗೆ ಹಾಕಿಕೊಂಡಿದ್ದರು. 12 ವರ್ಷದೊಳಗಿನ ಮೂರೂ ಮಾದರಿಯಲ್ಲಿ (ಬ್ಲಿಟ್ಜ್, ರ್‍ಯಾಪಿಡ್, ಕ್ಲಾಸಿಕಲ್)

### ಕ್ಯಾಂಡಿಡೇಟ್ಸ್‌ನಲ್ಲಿ ಭಾರತೀಯರ ದರ್ಬಾರ್!

The Indian earthquake in Toronto. ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗುಕೇಶ್‌ರ ಗೆಲುವನ್ನು ಚೆಸ್ ದಂತಕಥೆ ರಷ್ಯಾದ ಗ್ಯಾರಿ ಕ್ಯಾಸ್ಪರೋವ್ ಬಣ್ಣಿಸಿರುವುದು ಹೀಗೆ. ಭಾರತದ ಆಟಗಾರನ ಸಾಧನೆಯ ಹಿನ್ನೆಲೆಯಲ್ಲಿ, ಚೆಸ್‌ನ ಸಂರಚನೆಯಲ್ಲಿಯೇ ಆಗಿರುವ ಬದಲಾವಣೆಯನ್ನು ಗ್ಯಾರಿ ಗುರ್ತಿಸಿದ್ದಾರೆ. ಈ ಹಿತಕರ ಕಂಪನದ ಮುನ್ನೆಲೆಯಲ್ಲಿ ಗುಕೇಶ್ ಇರುವರಾದರೂ, ಅವರ ಹಿಂದೆ ಭಾರತದ ಯುವ ಆಟಗಾರರ ದಂಡೇ ಇರುವುದನ್ನು ಗಮನಿಸಬೇಕು. ಈ ಬಾರಿಯ ಕ್ಯಾಂಡಿಡೇಟ್ಸ್‌ನಲ್ಲಿ ಭಾರತದ ಚೆಸ್ ಆಟಗಾರರು ಹಲವು ದಾಖಲೆಗಳನ್ನು ಸೃಷ್ಟಿಸಿದರು.

- ಟೂರ್ನಿ ಆರಂಭಗೊಳ್ಳುವ ಮೊದಲೇ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಭಾರತದ ಆಟಗಾರರಿಂದ ವಿಶಿಷ್ಟ ದಾಖಲೆಯೊಂದು ನಮೂದಾಗಿತ್ತು. ವೈಶಾಲಿ ಮತ್ತು ಪ್ರಜ್ಞಾನಂದ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುವ ಮೂಲಕ, ಒಂದೇ ಕುಟುಂಬದ ಇಬ್ಬರು ಈ ಟೂರ್ನಿಯಲ್ಲಿ ಮೊದಲ ಬಾರಿಗೆ ಭಾಗವಹಿಸಿದ ದಾಖಲೆ ಸೃಷ್ಟಿಯಾಯಿತು.
- ಪುರುಷರ ವಿಭಾಗದಲ್ಲಿನ ಎಂಟು ಆಟಗಾರರ ಪೈಕಿ ಮೂವರು ಭಾರತೀಯರೇ ಇದ್ದುದು ವಿಶೇಷ. ಗುಕೇಶ್, ಪ್ರಜ್ಞಾನಂದ ಹಾಗೂ ವಿದಿತ್ ಗುಜರಾತಿ ಟೂರ್ನಿಯಲ್ಲಿ ಭಾಗವಹಿಸಿದ ಭಾರತೀಯ ಗ್ರ್ಯಾಂಡ್ ಮಾಸ್ಟರ್‌ಗಳು. ಮಹಿಳಾ ವಿಭಾಗದಲ್ಲಿ ವೈಶಾಲಿ ಹಾಗೂ ಕೊನೆರು ಹಂಪಿ ಭಾರತವನ್ನು ಪ್ರತಿನಿಧಿಸಿದ್ದರು. ಹೀಗಾಗಿ, ಒಟ್ಟು ಐವರು ಆಟಗಾರರು ಟೊರಾಂಟೊದಲ್ಲಿ ಭಾರತೀಯ ಧ್ವಜವನ್ನು ಪ್ರತಿನಿಧಿಸಿದ್ದರು.
- ಹದಿನೇಳು ವರ್ಷದ ಗುಕೇಶ್ ಚಾಂಪಿಯನ್ ಆಗುವ ಮೂಲಕ, ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದ ಅತ್ಯಂತ ಕಿರಿಯ ಆಟಗಾರ ಎನ್ನುವ ದಾಖಲೆ ಸೃಷ್ಟಿಯಾಯಿತು. ಇದುವರೆಗೂ ಈ ದಾಖಲೆ ಗ್ಯಾರಿ ಕ್ಯಾಸ್ಪರೋವ್ ಹೆಸರಿನಲ್ಲಿತ್ತು. ವಿಶ್ವನಾಥನ್ ಆನಂದ್ ನಂತರ ಈ ಸಾಧನೆ ಮಾಡಿದ ಎರಡನೇ ಭಾರತೀಯ ಎನ್ನುವ ಕೀರ್ತಿಯೂ ಅವರದಾಯಿತು. ಈ ವರ್ಷದ ಕೊನೆಯಲ್ಲಿ ನಡೆಯುವ, ಚೀನಾದ ಡಿರೆನ್ ಲಿಂಗ್ ವಿರುದ್ಧದ ಹಣಾಹಣಿಯಲ್ಲಿ ಗುಕೇಶ್ ಗೆದ್ದರೆ, ಅತ್ಯಂತ ಕಿರಿಯ ವಿಶ್ವ ಚಾಂಪಿಯನ್ ಎನ್ನುವ ದಾಖಲೆಯೂ ಅವರದಾಗುತ್ತದೆ.



ಕ್ಯಾಂಡಿಟೇಟ್ಸ್ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದ ಭಾರತದ ಕೊನೆರು ಹಂಪಿ